**OS-65/2016 D.W.2**

ದಿನಾಂಕ 08.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಪಾಟೀ ಸವಾಲು :**</u> ವಾದಿಯ ಪರವಾಗಿ ಶ್ರೀGCT ವಕೀಲರಿಂದ :-

ನನ್ನ ಹಾಗೂ ವಾದಿ ಪ್ರತಿವಾದಿಯರ ತಂದೆಯ ಹೆಸರುಬಸ್ಸಪ್ಪ ಎಂದರೆಸರಿ. ನನ್ನ ತಂದೆಗೆ 4 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಬಸ್ಸಪ್ಪ 05.06.2015 ರಂದು ಮರಣ ಹೊಂದಿರುತ್ತಾರೆಂದರೆ ಸರಿ. ನನ್ನ ತಾಯಿ ಸಣ್ಣಮ್ಮ 08.04.2005 ರಂದು ಮರಣ ಹೊಂದಿರುತ್ತಾರೆಂದರೆ ಸರಿ.

1, 2 ಮತ್ತು 4 ನೇ ದಾವಾ ಆಸ್ತಿಗಳ ಖಾತೆ ನನ್ನ ತಂದೆಯ ಹೆಸರಿಗೆ ಇದೆ ಎಂದರೆ ಸರಿ. 3, 5 ರಿಂದ 7 ನೇ ದಾವಾ ಆಸ್ತಿಗಳು ಖಾತೆ ನನ್ನಹೆಸರಿನಲ್ಲಿ ಇದೆ ಎಂದರೆ ಸರಿ. ನಾನು 3 ನೇ ಪ್ರತಿವಾದಿಯ ಸಹಕಾರದಿಂದ ಒಟ್ಟು ಕುಟುಂಬದ ವ್ಯವಹಾರಗಳನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ.ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ನನ್ನ ಹೆಸರಿನಲ್ಲಿ ಖಾತೆ ಇರುವ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು. ವಾದಿ ಪ್ರತಿವಾದಿಯರು ಮತ್ತು ನಾನು ಒಟ್ಟು ಕುಟುಂಬದಸದಸ್ಯರು ಎಂದರೆ ಸರಿಯಲ್ಲ. ಹೆಣ್ಣುಮಕ್ಕಳಲ್ಲಿಹೊಂದಾಣಿಕೆ ಬರದ ಕಾರಣ ನಾವು ಪ್ರತ್ಯೇಕವಾಗಿ ವಾಸವಾಗಿದ್ದು ಒಟ್ಟು ಕುಟುಂಬದ ಸದಸ್ಯರಾಗಿರುತ್ತೇವೆ ಎಂದರೆ ಸರಿಯಲ್ಲ. ಇದುವರೆಗೂ ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿಯಾವುದೇವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಆಗಿರುವ ಬಗ್ಗೆ ನಾನು ಮರಣಶಾಸನ ಪತ್ರವನ್ನು ಹಾಜರು ಮಾಡಿರುತ್ತೇನೆ.3 ನೇದಾವಾಆಸ್ತಿಯನ್ನು ದೊರನಾಳು ಗ್ರಾಪಂ ಯವರು ಒಟ್ಟು ಕುಟುಂಬದ ಪರವಾಗಿ ನನ್ನ ಹೆಸರಿಗೆ ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. 5 ರಿಂದ 7 ನೇ ದಾವಾ ಆಸ್ತಿಗಳನ್ನುನಾನು ಒಟ್ಟು ಕುಟುಂಬದ ಆಸ್ತಿಗಳಿಂದಬಂದ ಆದಾಯದಿಂದ ಕೊಂಡುಕೊಂಡಿರುತ್ತೇನೆ ಎಂದರೆ ಸರಿಯಲ್ಲ.ಹಾಗಾಗಿ 3 ಮತ್ತು 5 ರಿಂದ 7 ನೇ ದಾವಾ ಆಸ್ತಿಗಳು ಸಹ ವಾದಿ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.ದಾವಾ ಆಸ್ತಿಗಳಲ್ಲಿ ವಾದಿ ಪ್ರತಿವಾದಿಯರಿಗೆ ತಲಾ 6 ನೇ ಒಂದು ಭಾಗ ಹಿಸ್ಸೆ ಇದೆ ಎಂದರೆ ಸರಿಯಲ್ಲ.

1 ನೇ ದಾವಾ ಆಸ್ತಿಯಿಂದ ಬಂದ ಆದಾಯದಿಂದ 3, 5 ರಿಂದ 7 ನೇ ದಾವಾ ಆಸ್ತಿಗಳನ್ನು ಕೊಂಡುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಅಸಲು ದಾವಾ 59/1995 ರ ದಾವೆಯನ್ನು ಹಾಕಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ದಾವೆಯ ವಾದ ಪತ್ರವನ್ನು ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ಈದಾವೆಯ 1 ರಿಂದ 4 ನೇದಾವಾ ಆಸ್ತಿಗಳು ಮತ್ತು ನಮ್ಮ ಒಟ್ಟು ಕುಟುಂಬದ ಸಂಸ್ಥೆ ರಶ್ಮಿ ಬಾರ್ ಅನ್ನು ಸೇರಿಸಿ ಹಾಕಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿದ್ದೇನು ಎಂದರೆ ಸರಿ. ಸಾಕ್ಷಿಗೆ ಸದರಿ ತಕರಾರನ್ನು ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ಸದರಿ ದಾವೆಯು ಈ ದಾವೆಯ ವಾದಿಯನ್ನು ಸೇರ್ಪಡೆ ಮಾಡಿರಲಿಲ್ಲ ಎಂದು ವಜಾಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ.

1 ನೇ ದಾವಾ ಆಸ್ತಿಯನ್ನು 06.05.1976 ರಲ್ಲಿ ಬಸ್ಸಪ್ಪ, ತಿಮ್ಮಣ್ಣ ಮತ್ತು ಅವರ ಮಗ ಎಸ್ ಟಿ ಪರಮೇಶ್ವರಪ್ಪ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

ನನ್ನತಂದೆ ಬಸ್ಸಪ್ಪ ಮೂಲ ಊರು ಮಂಗೇನಹಳ್ಳಿ ಎಂದರೆ ಸರಿ. ನನ್ನತಂದೆ ತನ್ನ ಭಾಗದ ಆಸ್ತಿಯನ್ನು ತನ್ನ ತಮ್ಮನಿಗೆ ಕೊಟ್ಟು ಅದರಿಂದ ಬಂದ ಆದಾಯದಲ್ಲಿ 1 ನೇ ದಾವ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನನ್ನತಂದೆ ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ಮರಣ ಹೊಂದುವ ಮೊದಲು ತನ್ನ ಎಲ್ಲಾ ಮಕ್ಕಳ ಬಳಿ ಚನ್ನಾಗಿದ್ದರು ಎಂದರೆ ಸರಿ. ಅವರ ಮರಣಪೂರ್ವದ 2 ವರ್ಷಗಳಿಂದ ಅವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಕಿವಿ ಕೇಳಿಸುತ್ತಿರಲಿಲ್ಲ ಹಾಗೂ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಪಾರ್ಶುವಾಯು ಕಾಯಿಲೆ ಇತ್ತು ಎಂದರೆ ಸರಿಯಲ್ಲ. ಅವರಿಗೆ ಸ್ವಲ್ಪ ಮಂಡಿನೋವು ಇತ್ತು ಎಂದು ನುಡಿಯುತ್ತಾರೆ. ಅವರು ಮರಣ ಹೊಂದುವಾಗ ದೊರಣಹಳ್ಳಿ

ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರ ಯೋಗಕ್ಷೇಮವನ್ನು 3 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ನೋಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ.

ನಿಡಿ.69 ಮರಣಶಾಸನ ಪತ್ರವನ್ನು ಟೈಪ್ ಮಾಡಿಸಿರುತ್ತಾರೆ. ನಿಡಿ.69 ನ್ನು ನಾನೇಟೈಪ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ69 ರಲ್ಲಿ ಮೊದಲನೇಖಂಡಿಕೆಯ ಹಾಲಿ ತರೀಕೆರೆ ಟೌನ್ ಪಿ ಎಂ ಕೆ ರಸ್ತೆಯಲ್ಲಿನ ಮನೆಯಲ್ಲಿ ವಾಸವಾಗಿರುವ ಎಂಬ ಬರವಣಿಗೆಯನ್ನು ನಾನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಿದ್ದುಪಡಿಗೆ ನನ್ನ ತಂದೆ ಷರಾ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ69 ನ್ನು ನಾನೇ ಸೃಷ್ಟಿ ಮಾಡಿ ನಾನೇ ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ಮರಣಶಾಸನ ಪತ್ರ ಬರೆಯುವಅಭಿಲಾಷೆ ಇರಲಿಲ್ಲ ಎಂದರೆ ಸರಿಯಲ್ಲ.

ನಿಡಿ69 ರ ದಿನಾಂಕ ಮತ್ತು ನನ್ನ ತಂದೆಯ ಮರಣ ದಿನಾಂಕ 05.06.2015 ರ ನಡುವೆ ಕೇವಲ 20 ದಿನಗಳ ಅಂತರ ಇರುವ ಕಾರಣ ಆ ಸಮಯದಲ್ಲಿ ನನ್ನ ತಂದೆಯ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ69 ರಲ್ಲಿ 1 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯಲ್ಲಿ 1 ಎಕರೆ ಮತ್ತು ದೊರನಾಳಿನಲ್ಲಿ ನಿವೇಶನವನ್ನುತೋರಿಸಿರುತ್ತಾರೆ ಎಂದರೆ ಸರಿ. ನಿಡಿ69 ರಲ್ಲಿ 2 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯಲ್ಲಿ 1 ಎಕರೆ ಮತ್ತು ದೊರನಾಳಿನಲ್ಲಿ ನಿವೇಶನವನ್ನುತೋರಿಸಿರುತ್ತಾರೆ ಎಂದರೆ ಸರಿ. ನಿಡಿ69 ರಲ್ಲಿ ನನಗೆ 1 ನೇ ದಾವಾ ಆಸ್ತಿಯಲ್ಲಿ 3 ಎಕರೆ 30 ಗುಂಟೆ ಮತ್ತು ದೊರನಾಳಿನಲ್ಲಿ ನಿವೇಶನವನ್ನುತೋರಿಸಿರುತ್ತಾರೆ ಎಂದರೆ ಸರಿ. ನಿಡಿ69 ರಲ್ಲಿ 3 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯಲ್ಲಿ 1 ಎಕರೆ 20 ಗುಂಟೆ ತೋರಿಸಿರುತ್ತಾರೆ ಎಂದರೆ ಸರಿ. ನಿಡಿ69 ರಲ್ಲಿ ವಾದಿಗೆ 1 ನೇ ದಾವಾ ಆಸ್ತಿಯಲ್ಲಿ 5 ಗುಂಟೆ ತೋರಿಸಿರುತ್ತಾರೆ ಎಂದರೆ ಸರಿ. ನಿಡಿ69 ರಲ್ಲಿ 5 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯಲ್ಲಿ 5 ಗುಂಟೆ ತೋರಿಸಿರುತ್ತಾರೆ ಎಂದರೆ ಸರಿ.

ನನ್ನ ತಂದೆ ಮರಣ ಹೊಂದುವಾಗ ಅವರಿಗೆ 80 ವರ್ಷಕ್ಕಿಂತ ಜಾಸ್ತಿ ವಯಸ್ಸಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಅವರಿಗೆ ಮರಣಶಾಸನವನ್ನು ಬರೆಯಲು ಶಕ್ತಿ ಇರಲಿಲ್ಲ

**OS-65/2016 D.W.2**

ಹಾಗಾಗಿ ನಾನೇ ನನ್ನ ಹೆಸರಿಗೆ ಹೆಚ್ಚು ಆಸ್ತಿಯನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಹಿ ಮಾಡುತ್ತಿದ್ದರು ಎಂದರೆ ಸರಿ. ದಾವಾಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾದ ಕಾರಣ ವಾದಿಪ್ರತಿವಾದಿಯರಿಗೆ ತಲಾ 6 ನೇ 1 ಹಿಸ್ಸೆ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.